<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.113/2023</u>

ದಿಃ 14.02.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-1 Pw-1

| | | |
|---|---|---|
| ಹೆಸರು | ಃ | ವಿಜಯಮ್ಮ |
| ಗಂಡನ ಹೆಸರು | ಃ | ಮೊಳ್ಳಯ್ಯ |
| ವಯಸ್ಸು | ಃ | 63 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಉಜ್ಜನಹಳ್ಳಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ನನಗೆ ಚಾಸಾ.2ರಿಂದ 13 ನಮ್ಮ ಊರಿನವರಾಗಿರುವುದರಿಂದ ನನಗೆ ಗೊತ್ತು.

2. ನಾನು ಹಿಂದೂ ಆದಿ ಕರ್ನಾಟಕ ಪರಿಶಿಷ್ಟ ಜಾತಿಗೆ ಸೇರಿದವಳಾಗಿರುತ್ತೇನೆ.

3. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

4. ಅವರಿಗೆ ನನ್ನ ಜಾತಿ ಗೊತ್ತು.

5. ಉಜ್ಜನಹಳ್ಳಿ ಕಾಲೋನಿ ಸರ್ವೆ ನಂಬರ್.56/2ರಲ್ಲಿ ಸರ್ಕಾರದವರು 1 ಎಕರೆ 6 ಗುಂಟೆ ಜಮೀನನ್ನು ನಮ್ಮ ಆದಿ ಕರ್ನಾಟಕ ಸಮುದಾಯದವರಿಗೆ ಸೈಟ್‌ಗಳನ್ನು ಹಂಚಿಕೆ ಮಾಡಿ, ಎ.ಕೆ. ಕಾಲೋನಿ ಎಂದು ಮಾಡಿರುತ್ತಾರೆ.

6. ಸದರಿ ಸೈಟ್‌ಗಳಲ್ಲಿ ಒಂದು ಸೈಟನ್ನು ನನ್ನ ಅತ್ತೆ ಸಿದ್ದಮ್ಮ ಇವಳ ಹೆಸರಿನಲ್ಲಿ ಮಂಜೂರು ಮಾಡಿರುತ್ತಾರೆ.

7. ಸದರಿ ನಮ್ಮ ಸೈಟಿನ ಪಕ್ಕದಲ್ಲಿ ಆರೋಪಿತರಿಗೆ ಸಂಬಂಧಿಸಿದ ಜಮೀನು ಇರುತ್ತದೆ.

8. ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ, ನಾವು ಸದರಿ ನಮ್ಮ ಸೈಟಿನಲ್ಲಿ ಮಧ್ಯಾಹ್ನ ಸುಮಾರು 2.00 ಗಂಟೆ ಸಮಯದಲ್ಲಿ ಸ್ವಚ್ಛಗೊಳಿಸಲು ಹೋಗಿದ್ದಾಗ, ಆರೋಪಿತರು ಅಲ್ಲಿಗೆ ಬಂದು ನಮ್ಮ ಜೊತೆಗೆ ಜಗಳ ಕಾಯ್ದು, ಸದರಿ ಸೈಟ್‌ನಲ್ಲಿ ನಮಗೆ ಸ್ವಚ್ಛ ಮಾಡಲು ಅವಕಾಶವಿಲ್ಲ ಎಂದು ಹೇಳಿ ಸದರಿ ಸೈಟು ನಮ್ಮ ಜಮೀನಾಗಿರುತ್ತದೆ ಎಂದು ತಂಟೆ ಮಾಡಿರುತ್ತಾರೆ.

9. ಅದೂ ಅಲ್ಲದೇ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಹೊಲತಿ ಎಂದು ಜಾತಿ ನಿಂದನೆ ಸಹ ಮಾಡಿ ಪ್ರಾಣದ ಬೆದರಿಕೆಯನ್ನೂ ಸಹ ಹಾಕಿರುತ್ತಾರೆ.

10. ಆ ಸಮಯದಲ್ಲಿ ಚಾಸಾ.2ರಿಂದ 5, 10, 12 ಮತ್ತು 13 ಇವರು ಜಗಳವನ್ನು ನೋಡಿ ಬಿಡಿಸಿಕೊಂಡಿರುತ್ತಾರೆ.

11. ನಂತರ, ಅದೇ ದಿನ ನಾನು ಪೊಲೀಸ್ ಠಾಣೆಗೆ ಹೋಗಿ ಒಂದು ಪಿರ್ಯಾದನ್ನು ಸಲ್ಲಿಸಿರುತ್ತೇನೆ.

12. ಸದರಿ ಪಿರ್ಯಾದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ಈಗ ನಿ.ಪಿ.1 ಎಂದು ಗುರುತಿಸಲಾಯಿತು.

13. ಅದರ ಮೇಲೆ ನಾನು ನನ್ನ ಬೆರಳು ಮುದ್ರೆಯನ್ನು ಹಾಕಿರುತ್ತೇನೆ.

14. ತದನಂತರ, ಸುಮಾರು 4-5 ದಿನಗಳ ಮೇಲೆ ಪೊಲೀಸರು ನನ್ನ ತೋರಿಕೆಯ ಮೇರೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪಂಚರಾದ ಚಾಸಾ.12 ಮತ್ತು 13 ಇವರ ಸಮಕ್ಷಮದಲ್ಲಿ ಸಾಯಂಕಾಲ 4.00 ರಿಂದ 4.45 ರವರೆಗೆ ಒಂದು ಸ್ಥಳ ಪಂಚನಾಮೆಯನ್ನು ಮಾಡಿ, ಅದರ ಮೇಲೆ ನನ್ನ ಬೆರಳು ಮುದ್ರೆಯನ್ನು ಪಡೆದಿರುತ್ತಾರೆ.

15. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ಈಗ ನಿ.ಪಿ.2 ಎಂದು ಗುರುತಿಸಲಾಯಿತು.

16. ಅದೇ ಸಮಯದಲ್ಲಿ ನಿ.ಪಿ.2 ಕ್ಕೆ ಸಂಬಂಧಿಸಿದಂತೆಯೇ ಪೊಲೀಸರು ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಸಿದ್ದು, ಅವುಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಕ್ರಮವಾಗಿ ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ.**

**ಆದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

17. ಸದರಿ ಘಟನೆಯು ದಿಃ04.04.2023 ರಂದು ನಡೆದಿದ್ದು, ನಾನು 6 ದಿನಗಳ ನಂತರ ಅಂದರೆ ದಿಃ10.04.2023 ರಂದು ತಡಮಾಡಿ ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ, ಅದೇ ದಿನ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತೇನೆ.

18. ಆ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಎಸ್.ಎನ್.ಜಿ., ವಕೀಲರಿಂದ 2 ಮತ್ತು 3 ನೇ ಆರೋಪಿಗಳ ಪರವಾಗಿಃ ಆರೋಪಿ ಪರ ವಕೀಲರು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಆರೋಪಿತರ ಕೋರಿಕೆಯ ಮೇರೆಗೆ ಪ್ರಸ್ತುತ ಸಾಕ್ಷಿಗೆ ರೂಪಾಯಿ 500/- ಸಾಕ್ಷಿ ಭತ್ಯೆಯನ್ನು ಕೊಡುವ ಕರಾರಿನ ಮೇರೆಗೆ ಪಾಟೀ ಸವಾಲಿಗೆಂದು ಸಮಯಾವಕಾಶ ನೀಡಲಾಗಿರುತ್ತದೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.